ಕಥೆ

# ಇವಾಕ್ಯುಯೇಷನ್

■ ತೆಲುಗು ಮೂಲ: **ಡಾ. ಕೆ. ಗೀತಾ**
■ ಕನ್ನಡಕ್ಕೆ: **ಎಂ.ಜಿ. ಶುಭಮಂಗಳ**
ಕಲೆ: ಗುರುದಾಸ್ ಶೆಣೈ



ಸೂಟ್‌ಕೇಸಿನಲ್ಲಿದ್ದ ನನ್ನ ಜೀವನದ ಅತಿ ಮುಖ್ಯವಾದ ಎರಡು ಫೋಟೊಗಳನ್ನು ತೆಗೆದು ಟೇಬಲ್ ಮೇಲಿಟ್ಟೆ. ಅಮ್ಮನ ಫೋಟೊ, ಪಕ್ಕದಲ್ಲಿಯೇ ನಮ್ಮ ಮಧುಚಂದ್ರದ ಫೋಟೊ. ಅದರಲ್ಲಿ ಶಶಾಂಕ್ ನನ್ನ ಭುಜದ ಸುತ್ತ ಕೈಹಾಕಿ ಹೊಳೆವ ಕಂಗಳಿಂದ ನನ್ನತ್ತ ತುಂಟ ನಗೆ ಬೀರುತ್ತಿದ್ದಾನೆ.

ಶಶಾಂಕ್ ಅಂಗಾತ ಮಲಗಿ ತಲೆ ಮೇಲೆ ಕೈಹೊತ್ತು ದೀರ್ಘಾಲೋಚನೆಯಲ್ಲಿ ಮುಳುಗಿದ್ದಾನೆ.

ಬಿಸಿನೀರಿನಲ್ಲಿ ತಲೆಸ್ನಾನ ಮಾಡಿ ಬರುವ ವೇಳೆಗೆ ಆಯಾಸವಾದಂತಾಗಿ ಮೈಯೆಲ್ಲ ನಿಶ್ಶಕ್ತವಾದರೂ, ಎಡೆಬಿಡದ ಆಲೋಚನೆಯಿಂದ ಉಸಿರು ಬಿಗಿಹಿಡಿದಂತಿದ್ದ ಮನಸು ಸ್ವಲ್ಪ ಹಗುರವಾಯಿತು.

ತಲೆ ಒರೆಸಿಕೊಳ್ಳುತ್ತ, 'ನೀನೂ ಹೋಗಬಾರದಾ, ಸ್ವಲ್ಪ ಫ್ರೆಷ್ ಆಗುತ್ತೆ' ಎಂದೆ.

ಇನ್ನೂ ಯೋಗಮುದ್ರೆಯಲ್ಲಿದ್ದ ಹಾಗೇ ಇದ್ದ ಶಶಾಂಕ್ ಊಂ, ಉಹೂಂ ಅನ್ನಲಿಲ್ಲ.

ಕೈಯಿಂದ ಅಲುಗಾಡಿಸಿದೆ.

'ಅಬ್ಬಾ, ರಾಗ ನನಗೆ ಕಿರಿಕಿರಿ ಮಾಡಬೇಡ. ಒಂದು ಸಲ ಹೇಳಿದರೆ ನಿನಗೆ ಅರ್ಥವಾಗುವುದಿಲ್ಲವಾ' ಎಂದು ಗಟ್ಟಿಯಾಗಿ ಅರಚಿದ.

'ಅದೇನು, ಯಾವಾಗ ಹೇಳಿದೆ?' ಎಂದೆ ನಾನೂ ಬಿಡದೆ.

'ಇದೇ ನಿನ್ನಿಂದ ದೊಡ್ಡ ತಲೆನೋವು. ಹಟ. ಈಗೇನು? ನೀನು ಸ್ನಾನ ಮಾಡಿದ ತಕ್ಷಣ ನಾನೂ ಮಾಡಬೇಕಾ? ನಾನು ಈಗಲೇ ಮಾಡುವುದಿಲ್ಲ' ಎಂದು ಪಕ್ಕಕ್ಕೆ ತಿರುಗಿ ಮುಸುಕೆಳೆದುಕೊಂಡ.

ಹೋಗದಿದ್ದರೆ ಬಿಡು, ನಿನ್ನ ಕರ್ಮ ಎನ್ನಬೇಕೆಂದು ಬಾಯ ತುದಿವರೆಗೂ ಬಂದರೂ, ಜಗಳ ಬೆಳೆಸುವ ಇಷ್ಟವಿಲ್ಲದೆ ಸುಮ್ಮನೆ ಬಾಲ್ಕನಿಗೆ ಬಂದು ಕುಳಿತೆ.

ದುಃಖ ಒತ್ತರಿಸಿ ಬರುತ್ತಿದೆ.

ಕಳೆದ ಆರು ತಿಂಗಳಿನಿಂದ ನಮ್ಮಿಬ್ಬರ ನಡುವೆ ಹೀಗೇ ಯಾವುದೋ ಒಂದು ಗಲಾಟೆ.

ಕೊರೊನಾ ತೀವ್ರತೆಯಿಂದಾಗಿ ಮಾರ್ಚ್‌ನಿಂದ ಮನೆಯಿಂದಲೇ ಕೆಲಸ ಮಾಡುವಂತೆ ಆಫೀಸಿನಿಂದ ಆದೇಶವಾಗಿದೆ. ಮನೆಯಿಂದಲೇ ಕೆಲಸವೆಂದರೆ– 'ಅಬ್ಬ' ಒಬ್ಬಳೇ ಇಷ್ಟು ದೊಡ್ಡ ಮನೆಯಲ್ಲಿ 'ಸಂಜೆ ಯಾವಾಗ ಆಗುತ್ತದೆಯೋ' ಎಂದು ಭಯದಿಂದ ಕಾಯುವ ಬಾಧೆ ತಪ್ಪುತ್ತದೆ; ತಿಂಡಿ, ಅಡುಗೆ ಇಬ್ಬರೂ ಸೇರಿ ಮಾಡಬಹುದು ಎಂದು ಖುಷಿಪಟ್ಟೆ.

ಆದರೆ ನಾನು ಅಂದುಕೊಂಡದ್ದೇ ಒಂದು, ನಡೆಯುತ್ತಿರುವುದು ಇನ್ನೊಂದು.

ಮನೆ ತೆಗೆದುಕೊಂಡಾಗಲೇ ಶಶಾಂಕ್ ತನ್ನ ಆಫೀಸಿನ ಕೆಲಸಕ್ಕೆಂದು ಪ್ರತ್ಯೇಕವಾಗಿ ಒಂದು ರೂಮ್ ಸಿದ್ಧಮಾಡಿಕೊಂಡಿದ್ದ.

ಆದರೆ ಮನೆಯಿಂದ ಒಂಟಿಯಾಗಿ ಕೆಲಸ ಮಾಡಲು ಇಷ್ಟವಿಲ್ಲದೆ ಆಫೀಸಿಗೇ ಹೋಗಿ ಬರುತ್ತಿದ್ದುದರಿಂದ ಇದುವರೆಗೂ ಆ ರೂಮಿಗೆ ಮೋಕ್ಷ ಸಿಕ್ಕಿರಲಿಲ್ಲ.

ಈಗ ಕಡ್ಡಾಯವಾಗಿ ಮನೆಯಿಂದಲೇ ಕೆಲಸ